

ಹೋದವರು ಭಾರವೆಂದು ಬಾಂಬೆ ಮಣ್ಣಲ್ಲಿ ಎಳ್ಳುನೀರು ಬಿಟ್ಟು ಬಂದರು. ಹೆಂಡತಿ ಗೌರವ್ವಜ್ಜಿ ಎದೆ ಒಡೆದುಹೋಯಿತು. ಮಕ್ಕಳು ಅನಾಥರಾಗಿ ಅಕ್ಷರಶಃ ಮಳೆಯಲ್ಲಿಯೇ ನಿಂತರು. ಮಕ್ಕಳನ್ನು ಊರಿಗೆ ಕರೆತಂದರು. ಶಂಕ್ರಮ್ಮ ಕುಳ್ಳಿ. ಬೆಳೆಯಲಿಲ್ಲ. ಬದುಕೂ ಬಾಳಗೊಡಲಿಲ್ಲ. ಜೀವ ಮಳೆಪಾಲಾಯಿತು. ಮೂರಡಿ ಎತ್ತರದ ಹುಡುಗಿಗೆ ಆರಡಿ ಎತ್ತರದ ಗಂಡ. ಥೇಟ್ ಈಚಲ ಗಿಡ. ಇವಳು ಮಾರಿಗೋಲ್ಡ. ಮಗು ಹುಟ್ಟಿತು. ಇನ್ನೇನು ಚಲೋ ಆಯಿತೆಂದರು. ಆವತ್ತು ಮಳೆ ದಿಕ್ಕು ತಪ್ಪಿ ಸುರಿದಿದೆ. ಅವರಂತೆ ಅವಳ ಮನೆಯೂ ನೆನೆದಿದೆ. ಬೀಳುವುದೆಂದು ಗೊತ್ತಿದ್ದೇ ಮಲಗಿದ್ದಾಳೆ. ದುರದೃಷ್ಟ ಪಕ್ಕದ ಮನೆ ಗೋಡೆ ಇವಳ ಮೇಲೆ ಬಿದ್ದಿದೆ. ಅವಳ ಮನೆ ಅವಳ ಸಾವಿಗೆ ಷರಾ ಬರೆಯಲಿಲ್ಲ. ತಬ್ಬಿದ ಮಗಳೊಂದಿಗೆ ಮಲಗಿದಲ್ಲೇ ಎಲ್ಲವನ್ನೂ ಮುಗಿಸಿಕೊಂಡಿದ್ದಳು. ಜೋಡಿಜೀವ ನೋಡಿ ಎದೆ ಒಡೆದು ಹೋಗಿತ್ತು. ಅಲ್ಲಿಗೆ ಅವಳ ಕಥೆ ಮುಗಿಯಿತು. ಬಿಟ್ಟೂ ಬಿಡದೇ ಹೊತ್ತುಕೊಂಡು ಹೋಗಲೆಂದೇ ಜೀವನಪೂರ್ತಿ ಸುರಿದ ಮಳೆ ತಾಯಿಮಗುವನ್ನು ಮಣ್ಣಾಗಿಸಿತ್ತು... ನಿಗೂಢ ಮಳೆಯಂತೆ ಹೇಳದೇ ನಮ್ಮೊಳಗೆ ಕಣ್ಣೀರು ಹನಿಸಿದಳು. ಆದರೆ, ಅವಳು ಸುರಿಸಿದ ನೀರು ಆಕಾಶದ ಯಾವ ಮೋಡ ತಲುಪಿತೋ...? ಈಗಲೂ ಮಳೆ ಬಂದಾಗ. ಸಿಡಿಲಂತೆ ಕರುಳ ಸುಡಿಸಿ ಉರಿಸುತ್ತಾಳೆ. ಯಾವ ಮಹಾಮಳೆಗೂ ಆರುವುದಿಲ್ಲ.

ಆ ದಿನ ಕತ್ತಲ ರಾತ್ರಿ. ಮಳೆ ಧೋ ಧೋ ಬಿಡದಂತಿತ್ತು. ಹರನಾಳಗಿ ನೀರೂ ತಾರಸಿಯಿಂದ ಧುಮ್ಮುಕ್ಕುತ್ತಿತ್ತು. ಹತ್ತಾರು ಪ್ಲಾಸ್ಟಿಕ್ ಕೊಡದೊಂದಿಗೆ ಅತ್ತೆ ಎದ್ದರು. ಅತ್ತೆ ಮೈ ಬಗ್ಗಿಸಿ ದುಡಿವಾಗ ಸೊಸೆ ಮಲಗುವುದಲ್ಲಿ ನಿಷಿದ್ಧ. ಅವರನ್ನು ಬಿಡಿಸಿ ನೀರು ಹಿಡಿಯತೊಡಗಿದೆ. ತೋಯ್ದು ತಪ್ಪಡಿಯಾದರೂ, ದೊಡ್ಡ ಹಂಡೆ ತುಂಬಿಸಿದೆ. ಸಮಾಧಾನವಿಲ್ಲ. ಕೊಳ, ಬೋಗುಣಿ. ಬಕೆಟ್ ಆಚೆ ಬಂದವು. ಹಂಡೆ ಬಾಯಿಗೆ ವಸ್ತ್ರ ಕಟ್ಟಿ ಅತ್ತೆ ನಿರಾಳಾದರು. ಅದೇ ಮರುದಿನ ನಲ್ಲಿ ನೀರು ಬಂತು. ಹಿಂದಿನ ರಾತ್ರಿ ತುಂಬಿಟ್ಟಿದ್ದ ಮಳೆ ನೀರು ಚೆಲ್ಲಿ, ನಲ್ಲಿ ನೀರು ತುಂಬಿಸಿಟ್ಟೆ. ನಲ್ಲಿ ನೀರಿಗೆ ಬರ. ವಾರಕ್ಕೊಮ್ಮೆ ಪಾಳಿ. ಅತ್ತೆ ಕಡೆಯಿಂದ ಶಹಬ್ಬಾಸ್‌ಗಿರಿ ಪಡೆಯಬಹುದು ಎಂದುಕೊಂಡೆ. ಅಂದುಕೊಂಡಿದ್ದು ಆಗುವುದು ಜಾಯಮಾನಕ್ಕೆ ಒಗ್ಗಿಲ್ಲ ಬಿಡಿ. ನೀರು ಕುಡಿದ ಅತ್ತೆ ಗುಡುಗಿದರು. ನನಗೋ ಅಚ್ಚರಿ. ನಾನು ತುಂಬಿದ್ದು